ಹೇಳಬಹುದು, ಎಷ್ಟೆಲ್ಲ ಭಾವನೆಗಳನ್ನು ಉದ್ದೀಪಿಸಬಹುದು ಎಂದು ಅಚ್ಚರಿ ಹುಟ್ಟಿಸಿವೆ. ಆಗ ಅತಿ ಸಣ್ಣ ಕತೆಯ ಬಗ್ಗೆ ಎಲ್ಲೋ ಓದಿದ ಸಾಲೊಂದು ನೆನಪಾಗುತ್ತದೆ – "ಅತಿ ಸಣ್ಣ ಕತೆ ಎಂದರೆ ಕತ್ತಲೆಯಲ್ಲಿ ಅಪರಿಚಿತನೊಬ್ಬ ಮುತ್ತು ಕೊಟ್ಟಂತೆ".

ನನ್ನ 'ವಿಗ್' ಕತೆಯನ್ನು ಕತೆಗಾರ ಎಸ್. ದಿವಾಕರ್ ಅವರು ಸಂಪಾದಿಸಿ ಪ್ರಿಸಮ್ ಪ್ರಕಾಶನ ತಂದಿರುವ 'ಕನ್ನಡದ ಅತಿ ಸಣ್ಣಕತೆಗಳು' ಸಂಕಲನಕ್ಕಾಗಿ ಆರಿಸಿದ್ದಾರೆನ್ನುವುದು ಖುಶಿಯ ವಿಷಯ.

ಡಾ. ಜಿ.ಎಸ್. ಆಮೂರರು 1999ರಲ್ಲಿ ಸಂಪಾದಿಸಿದ ಶತಮಾನದ ಮಹಿಳೆಯರ ಆಯ್ದ ಇಪ್ಪತ್ತೈದು ಕತೆಗಳ ಸಂಕಲನ 'ಅವಳ ಕತೆಗಳು'. ಅದರಲ್ಲಿ ಅವರು ನನ್ನ ಕತೆ 'ದೇಹಾಂತ'ದ ಬಗ್ಗೆ ಬರೆಯುತ್ತಾ, "...ಇದುವರೆಗೂ ವಿವರಿಸಿದ ಯಾವ ಗುಂಪುಗಳಿಗೂ ಈ ಕತೆ ಸೇರುವುದಿಲ್ಲ. ಈ ಕತೆಯಲ್ಲಿಯೂ ಒಂದು ದಾಂಪತ್ಯವಿದೆ. ಆದರೆ ಕತೆ ದಾಂಪತ್ಯದ ಸರಸ ಅಥವಾ ವಿರಸಗಳಿಗೆ ಸಂಬಂಧಿಸಿಲ್ಲ. ಈ ಕತೆಯ ನಾಯಕ ರಾಜೀವ, ವಿನಿಮಯ ಅರ್ಥವ್ಯವಸ್ಥೆಯ ಒಂದು ಅಂಗವಾಗಿ ಆರ್ಥಿಕ ಯಶಸ್ಸಿನ ಬೆನ್ನು ಹತ್ತಿ ತಾನು ಹುಟ್ಟಿದ ಗ್ರಾಮೀಣ ನೆಲೆಯಿಂದ ಬಹುದೂರ ಹೋಗಿದ್ದಾನೆ. ತನ್ನಲ್ಲಾದ ಪರಿವರ್ತನೆ ಅವನಿಗೇ ಆಶ್ಚರ್ಯಕರವಾಗಿ ಕಾಣುತ್ತದೆ. ತಾನು ಚಿಕ್ಕಂದಿನಲ್ಲಿ ಪ್ರೀತಿಸಿದ, ತನ್ನನ್ನು ಅತಿಶಯವಾಗಿ ಪ್ರೀತಿಸಿದ ಶ್ರೀಪಾದುಮಾಮ ತೀರಿ ಹೋದ ಸುದ್ದಿ ಬಂದಾಗ ಒಂದು ಕ್ಷಣ ನಿಂತು ಅವನು ತನ್ನ ಬದುಕಿನ ದುರಂತವನ್ನು ಕಣ್ದೆರೆದು ನೋಡುವಂತಾಗುತ್ತದೆ.

ಊರಿಗೆ ಹೋದಾಗಲೆಲ್ಲಾ, ತನ್ನ ಬಾಲ್ಯವನ್ನು ಅದರ ಮೂಲಕ ಬಾಲ್ಯದ ತನ್ನನ್ನು ಜೀವಂತವಾಗಿರಿಸುತ್ತಿದ್ದ ಶ್ರೀಪಾದುಮಾಮ ಸತ್ತು ಹೋಗಿದ್ದು ಎಂದು? ತನ್ನ ಜೀವಮಾನದಲ್ಲಿ ನಡೆದ ಘಟನೆಗಳನ್ನು ಒಂದರ ಹಿಂದೊಂದರಂತೆ ನೋಡುತ್ತಾ ನಡೆದಾಗ ಅವನಿಗೆ ದೇಹಾಂತ ಶ್ರೀಪಾದುಮಾಮನದಾದರೂ ನಿಜವಾಗಿ ಸತ್ತವನು ತಾನೇ ಎನ್ನುವ ಸತ್ಯದ ಅರಿವಾಗುತ್ತದೆ. ಈ ಕ್ಷಣವೇ ಕತೆಯ ಜೀವಾಳವಾಗಿದೆ. ಶ್ರೀಪಾದುಮಾಮ ತನ್ನ ಆಸ್ತಿಯನ್ನು ರಾಜೀವನಿಗೆ ಬಿಟ್ಟುಕೊಟ್ಟಿದ್ದರೂ ಅದನ್ನು ಅವನು ಸ್ವೀಕರಿಸಲಾರ. "ಹೇಳಿದೆನಲ್ಲಾ ...ಶ್ರೀಪಾದುಮಾಮ ಆಸ್ತಿ ಬಿಟ್ಟಿದ್ದು ನನಗಲ್ಲ..." ಅದು ಆಸ್ತಿ ಮೇಲೆ ಕಣ್ಣಿಟ್ಟ ರಮಾಳಿಗೆ ಅವನ ಕೊನೆಯ ಉತ್ತರ. ವಿನಿಮಯ ಅರ್ಥವ್ಯವಸ್ಥೆಯಲ್ಲಿ ಮೌಲ್ಯಗಳ ಅಧಃಪತನ ಬಗ್ಗೆ ಗೋಲ್ಡ್ ಮನ್ ಹೇಳಿದ ಮಾತು ಈ ಕತೆಗೆ ಸರಿಯಾಗಿ ಅನ್ವಯಿಸುತ್ತದೆ. ಇಂಥಾ ಆಧುನಿಕ ವಸ್ತುವನ್ನು ತಮ್ಮ ಕತೆಗೆ ಆಯ್ದುಕೊಂಡಿದ್ದು ಉಮಾ ರಾವ್ ಅವರ ವೈಶಿಷ್ಟ್ಯವಾಗಿದೆ..."

ಹಿರಿಯ ವಿಮರ್ಶಕ ಆಮೂರರಿಂದ ಬಂದ ಈ ಅಭಿಪ್ರಾಯ ನನಗೆ ತುಂಬಾ ಖುಶಿ ಕೊಟ್ಟಿದೆ.

ಮುಂಬೈಯಿಂದ ಬೆಂಗಳೂರಿಗೆ ಬಂದು ಇಷ್ಟು ವರ್ಷಗಳಾದರೂ ಅದೇಕೋ ಇಂದಿನ ಬೆಂಗಳೂರು ಹಾಗೆ ನನ್ನೊಳಗೆ ಇಳಿದಿಲ್ಲ.

ಹಾಗೇ ಯೋಚನೆ ಮಾಡಿದಾಗ ಮುಂಬೈಯೇ ನನ್ನ ಭಾಷೆಯಾಗಿತ್ತು. ಅದನ್ನು ಒಂದು ರೀತಿ ಕಳೆದುಕೊಡು ಬಿಟ್ಟೆನೇನೋ ಎಂದು ಅನ್ನಿಸಿ ನೋವಾಗುತ್ತದೆ...

ಮಾರ್ಕ್ವೆಜ್‌ನ ಮಾತುಗಳು ಕಾಡುತ್ತಲೇ ಇರುತ್ತವೆ. "ಬದುಕಿನಲ್ಲಿ ನಿಮಗೇನಾಯಿತು ಎನ್ನುವುದು ಮುಖ್ಯವಲ್ಲ. ಆದ ಅನುಭವಗಳಲ್ಲಿ ಯಾವುದು ನಿಮ್ಮ ನೆನಪಿನಲ್ಲಿ ಉಳಿಯುತ್ತದೆ ಯಾವ ರೂಪದಲ್ಲಿ ಉಳಿಯುತ್ತದೆ ಎನ್ನುವುದು ಮುಖ್ಯ."

✽